**ಕರ್ನಾಟಕ ಸರ್ಕಾರ**

ಪಪೂಶಿ/ಶೈಶಾ/ಇಕೋ/ಅಪಜೀ/02/2015-16

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡ ರಸ್ತೆ, ಮಲೇಶ್ವರಂ,
ಬೆಂಗಳೂರು-12

**ಜ್ಞಾಪನ**

ದಿನಾಂಕಃ 13-08-2015

ವಿಷಯಃ- ಪರಿಸರ ಮತ್ತು ಜೀವ ಶಾಸ್ತ್ರ ಇಲಾಖೆಯ ಯೋಜನಾ ಲೆಕ್ಕಶೀರ್ಷಿಕೆ **"3435-03-103-0-08"** ಇಕೋ ಕ್ಲಬ್ ಯೋಜನೆಯಡಿ ಅನುದಾನ ಬಿಡುಗಡೆ ಬಗ್ಗೆ - ರಾಜ್ಯದ ಆಯ್ದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಇಕೋ ಕ್ಲಬ್ ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖಃ ಸರ್ಕಾರದ ಪತ್ರ ಸಂಖ್ಯೆ: ಅಪಜೀ 155 ಇಪಿಸಿ 2014 ದಿನಾಂಕ 26-05-2015.

****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯ್ದ ಕಾಲೇಜುಗಳಿಗೆ 2014-15ನೇ ಸಾಲಿಗೆ ರಾಷ್ಟ್ರೀಯ ಹಸಿರು ಪಡೆ (Eco clubs) ಕಾರ್ಯಕ್ರಮವನ್ನು ಉಲ್ಲೇಖಿತ ಸರ್ಕಾರದ ಕಾರ್ಯದರ್ಶಿಗಳು, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಬೆಂಗಳೂರು ರವರ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಕಾರ್ಯಕ್ರಮದ ಕುರಿತು ಈ ಪತ್ರಕ್ಕೆ ನಮೂನೆ / ಮಾಹಿತಿಯನ್ನು ಇಲಾಖಾ ಅಂತರ್ಜಾಲ www.pue.kar.nic.in ನಲ್ಲಿ ಅಳವಡಿಸಲಾಗಿರುತ್ತದೆ. ಅದರಂತೆ ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳಲ್ಲಿ (ಪಟ್ಟಿ ಲಗತ್ತಿಸಿದೆ) ಪ್ರತಿ ಕಾಲೇಜಿಗೆ ಇಕೋ ಕ್ಲಬ್ ಸ್ಥಾಪಿಸಲು ಮತ್ತು ಕಾರ್ಯಕ್ರಮ ಏರ್ಪಡಿಸಲು ರೂ. 5,000/- ರಂತೆ ಒಟ್ಟು ಕಾಲೇಜುಗಳಿಗೆ ರೂ.                ನಿಮ್ಮ ಜಿಲ್ಲೆಯ ಉಪ ನಿರ್ದೇಶಕರ ಬ್ಯಾಂಕ ಖಾತೆಗೆ Online Banking ಮೂಲಕ ವರ್ಗಾಯಿಸಲಾಗಿದೆ.

-- 2

ನಿಮ್ಮ ಜಿಲ್ಲೆಗೆ ಹಣ ವರ್ಗಾವಣೆಯಾದ ಕೂಡಲೇ ಪಟ್ಟಿಯಲ್ಲಿರುವ ಸಂಬಂದಪಟ್ಟ ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ರೂ. 5,000/- 3 ದಿನಗಳೊಳಗಾಗಿ ಬಿಡುಗಡೆ ಮಾಡಿ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಲು ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ಪ್ರತಿ ಕಾಲೇಜಿನಿಂದ ಹಣ ಸಂದಾಯ ಪಾವತಿ ರಸೀದಿ / ಉಪಯೋಗತ ಪತ್ರವನ್ನು ಪಡೆದು ನಿಮ್ಮ ಜಿಲ್ಲೆಗೆ ಸಂಬಂಧ ಪಟ್ಟ ಒಟ್ಟು ಕಾಲೇಜುಗಳಿಗೆ ಪಡೆಯಲಾದ ಒಟ್ಟು ಮೊತ್ತಕ್ಕೆ ಉಪಯೋಗತ ಪತ್ರವನ್ನು 5 ದಿನಗಳ ಒಳಗಾಗಿ ಎಸ್. ಜಂಬಣ್ಣ, ಸಮನ್ವಯಾಧಿಕಾರಿ, ರಾಷ್ಟ್ರೀಯ ಹಸಿರು ಪಡೆ, / ಸಹಾಯಕ ನಿರ್ದೇಶಕ( ಪರೀಕ್ಷೆ ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಈ ವಿಳಾಸಕ್ಕೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
13/8

ಅಡಕಃ 1. ಕಾಲೇಜುಗಳ ಪಟ್ಟಿ.

ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಜಿಲ್ಲೆ

ಪ್ರತಿಃ

1. ಸರ್ಕಾರದ ಕಾರ್ಯದರ್ಶಿಗಳು, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, (ಪರಿಸರ ) ಬೆಂಗಳೂರು ರವರ ಮಾಹಿತಿಗಾಗಿ

## ರಾಷ್ಟ್ರೀಯ ಹಸಿರು ಪಡೆ (Eco clubs) ಕಾರ್ಯಕ್ರಮ ಕುರಿತು ಮಾಹಿತಿ.

ಜಿಲ್ಲಾ ಉಪನಿರ್ದೇಶಕರುಗಳಿಗೆ ಈಗಾಗಲೇ online ಮೂಲಕ ಬಿಡುಗಡೆಯಾಗುವ ಮೊತ್ತವನ್ನು ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ರೂ. 5,000/-ರಂತೆ ಬಿಡುಗಡೆ ಮಾಡಲು ಸೂಚಿಸಲಾಗಿದೆ.

- ಜಿಲ್ಲಾ ಉಪನಿರ್ದೇಶಕರ ಕಚೇರಿಯಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿಕೊಂಡು ಕಾರ್ಯಕ್ರಮ ವರದಿಗಳನ್ನು ಕ್ರೋಢೀಕರಿಸಿ ಕೇಂದ್ರ ಕಚೇರಿಗೆ ಸಂಕ್ಷಿಪ್ತ ವರದಿಯನ್ನು ಕಾಲ ಕಾಲಕ್ಕೆ ಕಳಿಸುವಂತೆ ವ್ಯವಸ್ಥೆ ಮಾಡ[illegible]
- ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರತಿ ಕಾಲೇಜಿಗೆ ರೂ. 5,000/-ರಂತೆ ಬಿಡುಗಡೆ ಮಾಡಿರುವ ಬಗ್ಗೆ ಪ್ರತಿ ಕಾಲೇಜಿನಿಂದ ಮೂಲ ಉಪಯೋಗಿತ ಪತ್ರವನ್ನು (Utilization Certificate) ಪಡೆದು, ಕ್ರೋಢಿಕರಿಸಿ ಕಾಲೇಜುಗಳು ಕಾರ್ಯಕ್ರಮ ಪ್ರಾರಂಬಿಸಿರುವ ಬಗ್ಗೆ photograph, ಪತ್ರಿಕಾ ಪ್ರಕಟಣೆ (ಇದ್ದಲ್ಲಿ )ಗಳನ್ನೊಳಗೊಂಡ ಒಂದು ಪ್ರಾಥಮಿಕ ವರದಿಯನ್ನು ಸಿದ್ದಪಡಿಸಿ 30 ದಿನಗಳೊಳಗಾಗಿ ಕಳುಹಿಸಲು ವ್ಯವಸ್ಥೆ ಮಾಡುವುದು. photograph, ಪತ್ರಿಕ ಪ್ರಕಟಣೆ (ಇದ್ದಲ್ಲಿ)ಗಳನೊಳಗೊಂಡ ಒಂದು ಪ್ರಾಥಮಿಕ ವರದಿಯನ್ನು ಸಿದ್ದಪಡಿಸಿ ಬಿಡುಗಡೆ ಮಾಡಲಾದ ಮೊತ್ತಕ್ಕೆ ಜಿಲ್ಲಾ ಉಪನಿರ್ದೇಶಕರು ಮೂಲ ಉಪಯೋಗಿತ ಪತ್ರ (Utilization Certificate) ವನ್ನು ಎಸ್ ಜಂಬಣ್ಣ, ಸಹಾಯಕ ನಿರ್ದೇಶಕ ಮತ್ತು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಸಮನ್ವಯಾಧಿಕಾರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಈ ವಿಳಾಸಕ್ಕೂ ಕಳುಹಿಸಿವಂತೆ ಸೂಚಿಸಲಾಗಿದೆ.
- e-Mail id: puecloclubreport@gmail.com ಈ ವಿಳಾಸಕ್ಕೆ ಸಹ ಕಳುಹಿಸಬಹುದಾಗಿದೆ.
- ಸದರಿ ಕಾರ್ಯಕ್ರಮವು 2015ರ ಡಿಸೆಂಬರ್ ತಿಂಗಳಿನಲ್ಲಿ ಮುಗಿಸುವಂತೆ ಮತ್ತು ಪ್ರತಿ ಜಿಲ್ಲೆಯ ಉಪ ನಿರ್ದೇಶಕರು ತಮ್ಮ ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಕಾರ್ಯಕ್ರಮದ ಉಸ್ತುವಾರಿ ಮಾಡುವಂತೆ ಸೂಚಿಸಲಾಗಿದೆ.

ಸಹ ನಿರ್ದೇಶಕರು, (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

File:Eco2014-15-2 Format p-13